# ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ವಾರ್ಡ್ ಸಮಿತಿ ಸಭೆ ನಡವಳಿಗಳು

ಶ್ರೀ. ನಿಶಾಂತ್ ನೋಡಲ್ ಅಧಿಕಾರಿ ಯರವರ ಘನ ಅಧ್ಯಕ್ಷತೆಯಲ್ಲಿ ದಿ:06.02.2021 ರಂದು ಮಧ್ಯಾಹ್ನ ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ಸಮಿತಿ ಸಭೆಯನ್ನು ನಡೆಸಲಾಯಿತು. ಸಮಿತಿಗೆ ಕೆಳಕಂಡ ಸದಸ್ಯರು ಹಾಜರಿರುತ್ತಾರೆ.

## ಸಭೆಗೆ ಹಾಜರಿದ್ದ ಅಧಿಕಾರಿಗಳು

| ಕ್ರಸಂ | ಹೆಸರು | ಹುದ್ದೆ |
|---|---|---|
| 1. | ಶ್ರೀ. ನಿಶಾಂತ್ ನೋಡಲ್ ಅಧಿಕಾರಿ | ಅಧ್ಯಕ್ಷರು. |
| 2. | ಶ್ರೀ. ಬಿ.ಸಿ. ಶಿವಣ್ಣ ಸ.ಅ | ಕಾರ್ಯದರ್ಶಿ. |
| 3. | ಶ್ರೀ. ಚೋಳೂರಯ್ಯ | ASI |
| 4. | ಶ್ರೀ. ಮಂಜುನಾಯ್ಕ್ | HC |
| 5. | ಶ್ರೀ.ಡಾ॥ ಮಂಜುನಾಥ್ | Covid Doctor |
| 6. | ಶ್ರೀ. ಶಿವಕುಮಾರ್ | ಕಂ.ಪ |
| 7. | ಶ್ರೀ. ಜಗದೀಶ್ | ಹಿ.ಆ.ಪ |
| 8. | ಶ್ರೀ. ಶಾಂತಕುಮಾರ್ | JHI |
| 9. | ಶ್ರೀ. ದೊಡ್ಡವೀರಪ್ಪ ಸ.ಅ | BWSSB |
| 10. | ಶ್ರೀ. ಅರುಣ್ ಕುಮಾರ್ ಸ.ಅ | ಬೆಸ್ಕಾಂ |
| 11. | ಶ್ರೀ. ಎ ಬಿ ನಾಗರಾಜ್ | ಸಾರ್ವಜನಿಕರು |
| 12. | ಶ್ರೀ. ಪ್ರಕಾಶ ನಾಯ್ಡು | ಸಾರ್ವಜನಿಕರು |
| 13. | ಶ್ರೀ. ಲಕ್ಷ್ಮಿನಾರಾಯಣ | ಸಾರ್ವಜನಿಕರು |

ವಾರ್ಡಿನ ಕಾರ್ಯದರ್ಶಿಗಳಾದ ಶ್ರೀ.ಬಿ.ಸಿ.ಶಿವಣ್ಣ ರವರು ಅಧ್ಯಕ್ಷರನ್ನೂ ಹಾಗೂ ಹಾಜರಿದ್ದ ಸದಸ್ಯರನ್ನು ಸ್ವಾಗತಿಸಿದರು.

**REVENUE**

- ಶ್ರೀ.ಶಿವಕುಮಾರ್ RI ರವರು Tax Collection ಬಗ್ಗೆ ವಿವರಿಸಿದರು ಹಿಂದಿನ ಪಾಕ್ಷಿಕದಲ್ಲಿ ಅಂದಾಜು ರೂ: 4.30 ಲಕ್ಷಗಳು ತೆರಿಗೆ ಸಂಗ್ರಹಿಸಿರುವುದಾಗಿ ತಿಳಿಸಿದರು.

**POLICE**

- ಕಳ್ಳಕಾಕರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿದ್ದು ಸದ್ಯದಲ್ಲಿ ಯಾವುದೇ ದೂರುಗಳು ಬಂದಿರುವುದಿಲ್ಲ ವಾರ್ಡ್‌ನಲ್ಲಿ ಪ್ರತಿ ದಿನ ಪ್ರಹರಿ ಸಿಬ್ಬಂದಿ ಯವರು ಪರಿವೀಕ್ಷಣೆ ಮಾಡುತ್ತಿರುವುದರಿಂದ ಅಂತಹ ಪ್ರಕರಣಗಳು ದಾಖಲಾಗಿರುವುದಿಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ಪರಿವೀಕ್ಷಕರ ಮೋಬೈಲ್ ಕಳುವಾಗಿದ್ದು ಹುಡುಕಿ ಕೊಡಬೇಕೆಂದು ಡಾ॥ ಮಂಜುನಾಥ್ ರವರು ಪೋಲಿಸ್ ಇಲಾಖೆಯವರನ್ನು ಕೋರಿದರು.
- ಪ್ರತಿ ನಾಲ್ಕನೇ ಶನಿವಾರ ಸಾರ್ವಜನಿಕರ ಸಭೆಯನ್ನು ಬ್ಯಾಟರಾಯನಪುರ ಪೋಲಿಸ್ ಠಾಣೆಯಲ್ಲಿ ಅಯೋಜಿಸಲಾಗುತ್ತದೆ. ಕುಂದು ಕೊರತೆಗಳು ಇದ್ದಲ್ಲಿ ಸಭೆಯಲ್ಲಿ ಬಾಗವಹಿಸಿ ತಮ್ಮ ಅಹವಾಲನ್ನು ಸಲ್ಲಿಸ ಬಹುದೆಂದು ಶ್ರೀ. ಚೋಳೂರಯ್ಯ ASI ರವರು ಸಭೆಗೆ ತಿಳಿಸಿದರು.

**BWSSB**

- ಹಿಂದಿನ ಸಭೆಯಲ್ಲಿ ಸೂಚಿಸಲಾಗಿದ್ದ ಎಲ್ಲಾ Manhole ಗಳ ಸಮಸ್ಯೆಗಳನ್ನು ಬಗೆ ಹರಿಸಿರುವುದಾಗಿ ಶ್ರೀ.ದೊಡ್ಡವೀರಪ್ಪ ಸ.ಅ (BWSSB) ರವರು ಸಭೆಗೆ ತಿಳಿಸಿದರು.
- ಹೆಚ್ ಕ್ರಾಸನಲ್ಲಿ ಒಂದು Manhole ನ ಸಮಸ್ಯೆಯಿದ್ದು ಅದನ್ನು ಹೊಸದಾಗಿ ನಿರ್ಮಿಸಬೇಕಾಗಿರುತ್ತದೆ. ಅದರೆ ಅಲ್ಲಿ Traffic ಬಹಳ ಇದ್ದು ಒಂದೆರಡು ದಿನ ರಸ್ತೆ ಸಂಚಾರವನ್ನು ನಿರ್ಬಂದಿಸಿದರೆ ಸಮಸ್ಯೆಯನ್ನು ಬಗೆಹರಿಸಿ. ಹೊಸದಾಗಿ Manhole ನಿರ್ಮಿಸಿಕೊಡುವುದಾಗಿ ತಿಳಿಸಿದರು.

**HEALTH**

ಇದುವರೆಗೂ 477 ಕೇಸ್‌ಗಳು ದಾಖಲಾಗಿದ್ದು ಈಗ ಮೂರು ಕೇಸ್‌ಗಳು ಮಾತ್ರ ಚಾಲ್ತಿಯಲ್ಲಿ ಇರುತ್ತದೆಂದು ಶ್ರೀ. ಜಗದೀಶ್ ರವರು ಸಭೆಗೆ ತಿಳಿಸಿದರು.

ನಮ್ಮ ಬಾಪೂಜಿನಗರದ ವಾರ್ಡ್‌ನಲ್ಲಿ ಕೋವೀಡ್-19 ಸೋಂಕು ನಿಯಂತ್ರಣದಲ್ಲಿ ಇರುವುದಾಗಿ ತಿಳಿಸಿದರು.

**SWM**

- ವಾರ್ಡ್‌ನಲ್ಲಿನ ರಸ್ತೆಗಳಲ್ಲಿ ವೈಜ್ಞಾನಿಕ ರೀತಿಯಲ್ಲಿ ಕಸವನ್ನು ಸಂಗ್ರಹಿಸಲಾಗುತ್ತಿದೆ ಕಸ ಸಾಗಿಸುವ ವಾಹನಗಳಲ್ಲಿ ಒಂದರೆಡು ದಿನ ವ್ಯತ್ಯಾಸವಾಗಿದ್ದು ಈಗ ಎಲ್ಲಾ ವಾಹನಗಳಲ್ಲಿ ಕಸವನ್ನು/ ಕಸದ Point ಗಳನ್ನು Clear ಮಾಡಿರುವುದಾಗಿ ಶ್ರೀ. ಶಾಂತಕುಮಾರ್ ರವರು ಸಭೆಗೆ ತಿಳಿಸಿದರು.

**BESCOM :**

- ಬೆಸ್ಕಾಂನ ಎಲ್ಲಾ Over head Cables ಗಳನ್ನು ತೆಗೆದು Underground Cables ಗಳಾಗಿ ಅಳವಡಿಸುವ ಕಾಮಗಾರಿಯನ್ನು ಸಧ್ಯದಲ್ಲಿ ಪ್ರಾರಂಭಿಸುವುದಾಗಿ ಶ್ರೀ.ಅರುಣ್ ಕುಮಾರ್ ರವರು ಸಭೆಗೆ ತಿಳಿಸಿದರು. ಮುಂದುವರೆದು ರಸ್ತೆಗಳಲ್ಲಿ ಬಾಗಿರುವ ಎಲ್ಲಾ ವಿದ್ಯುತ್ ಕಂಬಗಳನ್ನು ತೆರವುಗೊಳಿಸುವುದಾಗಿ ತಿಳಿಸಿದರು.
- ಹಿಂದಿನ ಸಭೆಯಲ್ಲಿ ಸೂಚಿಸಲಾಗಿದ್ದ ಎಲ್ಲಾ ವಿದ್ಯುತ್ ಕಂಬಗಳ Bulb ಗಳನ್ನು ಬದಲಾಯಿಸಲಾಗಿದೆ.

**GENERAL**

ಮುಖ್ಯರಸ್ತೆಗಳ ಜಂಕ್ಷನ್‌ಗಳಲ್ಲಿ ಅದಷ್ಟು ಸಿಸಿ ಕ್ಯಾಮರಗಳನ್ನು ಅಳವಡಿಸಿಕೊಡಬೇಕೆಂದು ಸಾರ್ವಜನಿಕರಾದ ಶ್ರೀ. ಪ್ರಕಾಶ್ ನಾಯ್ಡು ರವರು ಕೋರಿದರು.

2ನೇ ಮುಖ್ಯರಸ್ತೆಯಲ್ಲಿ Hospital ಬಳಿ No Parking Board ಗಳನ್ನು ಅಳವಾಡಿಸಿ ಬಹಳ ದಿನಗಳಿಂದ ನಿಂತಿರುವ ವಾಹನಗಳನ್ನು ತೆರವುಗೊಳಿಸಲು ಕೋರಿದರು.

ಬಾಪೂಜಿನಗರದ 10 ನೇ ಕ್ರಾಸ್‌ನಿಂದ ಹೊಸಗುಡ್ಡದಹಳ್ಳಿ A Street ವರೆಗೆ SWD ಮೇಲೆ ಒಂದು ಎತ್ತರದ ರಸ್ತೆ ನಿರ್ಮಿಸಿಕೊಡಬೇಕೆಂದು ಕೋರಿದರು.

ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 2ನೇ ಮುಖ್ಯರಸ್ತೆಯಿಂದ ಒಂದು ಗೇಟ್‌ನ್ನು ನಿರ್ಮಿಸಿಕೊಡಬೇಕೆಂದು ಕೋರಿದರು.

ನಾಯ್ಡು ರಂಗ ಮಂದಿರದ ಪಾರ್ಕ್‌ನಲ್ಲಿ ನೆರಳಿಗೆ ವೃಕ್ಷಗಳನ್ನು ಬೆಳಸಿ ಅನುಕೂಲ ಮಾಡಿಕೊಡಬೇಕೆಂದು ಶ್ರೀ.ಲಕ್ಷ್ಮೀ ನಾರಾಯಣ ಹಾಗೂ ಶ್ರೀ.ಎ.ಟಿ ನಾಗರಾಜ್ ರವರು ಕೋರಿದರು.

ಮೇಲೆ ಸೂಚಿಸಿರುವ ಎಲ್ಲಾ ಆದೇಶಗಳನ್ನು ಪಾಲಿಸಿ ವರದಿಯನ್ನು ಸಲ್ಲಿಸುವುದಾಗಿ ಕಾರ್ಯದರ್ಶಿ ರವರು ತಿಳಿಸಿದರು.
ವಂದನಾರ್ಪಣೆಯನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಬೆಂಗಳೂರು.
ದಿ: 06.03.2021

AE.134

ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರು
ವಾರ್ಡ್ ಸಂ: 134